ಶತಮಾನದ ಸಾದತ್ ಹಸನ್ ಮಂಟೋ, ಇತ್ಯಾದಿ ಹಲವಾರು ಮಂದಿ ನನಗೆ ಕಥೆ ಬರೆಯುವುದನ್ನು ಹೇಳಿಕೊಟ್ಟಿದ್ದಾರೆ. ಮಲಯಾಳಂನಲ್ಲಿ ವೈಕಂ, ಕಮಲಾದಾಸ್, ಓ.ವಿ. ವಿಜಯನ್, ಪೊನ್‌ಕುನ್ನಮ್ ವರ್ಕ್ಕಿಯಂತಹ ಹಲವರಿದ್ದಾರೆ. ಕಲಿಯುವಿಕೆ ಅನ್ನುವುದು ಬರವಣಿಗೆಯಿಂದ ಮುಕ್ತಾಯ ಆಗುವಂತಹದ್ದಲ್ಲ. ಸೃಜನಶೀಲ ಬರವಣಿಗೆ ಅಂದರೆ, ನಮಗಿಂತ ಮೊದಲು ಆಗಿ ಹೋಗಿರುವ ಅಸಂಖ್ಯ- ದೊಡ್ಡ ಮತ್ತು ಚಿಕ್ಕ- ಚೈತನ್ಯದ ಬುಗ್ಗೆಗಳ ಮೂಲಕ ನಮ್ಮನ್ನು ನಾವು ಕಂಡುಕೊಳ್ಳುವುದು.

**◆ ನೀವು ಬರೆಯಲು ತೊಡಗುವ ಮೊದಲೇ ಪೂರ್ಣ ಕಥೆ ನಿಮ್ಮ ಮನಸ್ಸಿನಲ್ಲಿರುತ್ತದೆಯೋ ಅಥವಾ ಬರೆಯುವ ಪ್ರಕ್ರಿಯೆಯಲ್ಲಿ ಕಥೆ ಉಂಟಾಗುತ್ತ, ಬೆಳೆಯುತ್ತದೆಯೋ?**

ಬರೆಯುವ ಮೊದಲೇ ಸಂಪೂರ್ಣವಾಗಿ ಯೋಜಿಸಿ ಬರೆಯಲು ನನಗೆ ಸಾಧ್ಯವಿಲ್ಲ. ನಾನು ಕಥೆಯೊಂದರಲ್ಲಿ ಪೂರ್ತಿ ಮುಳುಗಿರುತ್ತೇನೆ. ಅದೃಷ್ಟಕ್ಕೆ, ಕಥೆಯ ಅರ್ಧದಲ್ಲಿ ಯಾರಾದರೂ ನನ್ನನ್ನು ಎತ್ತಿಕೊಳ್ಳುತ್ತಾರೆ ಮತ್ತು ಸರಿಯಾದ 'ಅಂತ್ಯ'ಕ್ಕೆ ಕೊಂಡೊಯ್ಯುತ್ತಾರೆ! ಕಲೆಯಲ್ಲಾಗಲೀ, ಸಾಹಿತ್ಯದಲ್ಲಾಗಲೀ ತುಂಬ ಪ್ಲಾನ್ ಮಾಡುವುದರಲ್ಲಿ ನಾನು ಅಷ್ಟು ಜಾಣನಲ್ಲ. ನನಗನ್ನಿಸೋದು ಏನಂದ್ರೆ – ಯಾವುದೇ ಕಲಾ ಪ್ರಕಾರವಾದರೂ ಸರಿ, ಅದನ್ನು ಸೃಷ್ಟಿ ಮಾಡುತ್ತಿರುವವರು ಅದರ ಮೇಲಿನ ತಮ್ಮ ಹಿಡಿತವನ್ನು ಸಡಿಲಗೊಳಿಸಬೇಕು ಅಂತ. ಲೇಖಕನಾದವನು ಬರೆಯುವ ಹೊತ್ತಿನಲ್ಲಿ ಒಂದು ಜೀವಂತ ಲೇಖನಿಯಾಗಬೇಕು ಮತ್ತು ಮುಂಚಲಿಸುತ್ತ ಇರಬೇಕು. ಇದು ಸರಿಯೋ, ತಪ್ಪೋ ಅಂತ ನನಗೆ ಪ್ರಾಮಾಣಿಕವಾಗಿ ಗೊತ್ತಿಲ್ಲ.

**◆ ಈಗ ಕನ್ನಡಕ್ಕೆ ಅನುವಾದಗೊಂಡಿರುವ ಕಥೆಗಳ ಪೈಕಿ ನಿಮ್ಮ ಹೃದಯಕ್ಕೆ ಹತ್ತಿರವಾದ ಕಥೆ ಯಾವುದು ಮತ್ತು ಯಾಕೆ?**

'ಮಮ್ಮುಮುಕ್ರಿ' ನನ್ನ ಮನಸ್ಸಿಗೆ ಹತ್ತಿರವಾದ ಕಥೆ. ಹೃದಯವನ್ನು ಮುಟ್ಟಿಕೊಳ್ಳದೆ ನನ್ನಿಂದ ಒಂದು ಪದವನ್ನೂ ಬರೆಯಲು ಸಾಧ್ಯವಿಲ್ಲ. ಕೆಲವರು



ನನ್ನ ಕಥಾಕೌಶಲ್ಯ ಮತ್ತು ವಸ್ತುವೈವಿಧ್ಯದ ಬಗ್ಗೆ ಹೇಳಿದ್ದಾರೆ, ಬರೆದಿದ್ದಾರೆ. ನಿಜ ಹೇಳಬೇಕೆಂದರೆ, ಕೌಶಲ್ಯದ ಬಗ್ಗೆ ನನಗೆ ಅಷ್ಟೇನೂ ಗೊತ್ತಿಲ್ಲ. ನಾನು ನೋಡಿದ ಬದುಕು ಮತ್ತು ಪಡೆದ ಅನುಭವಗಳನ್ನು ಕುರಿತು ಬರೆಯುತ್ತೇನೆಯೇ ಹೊರತು ಬೇರೇನನ್ನೂ ಬರೆಯುವುದಿಲ್ಲ. ಇದರ ಜೊತೆಜೊತೆಗೆ, ನನ್ನ ಕಥೆಗಳನ್ನು ಆದರಿಸುವ ಮತ್ತು ನಿರಾಕರಿಸುವ ಓದುಗರ ಸ್ವಾತಂತ್ರ್ಯವನ್ನೂ ನಾನು ಗೌರವಿಸುತ್ತೇನೆ.

**◆ ಕಥೆಗಳನ್ನು ಬರೆಯುವಾಗ ಯಾವ ಬಗೆಯ ಓದುಗರು ನಿಮ್ಮ ಮನಸ್ಸಿನಲ್ಲಿರುತ್ತಾರೆ?**

ವಾಸ್ತವವಾಗಿ ನಾನು ಏಕಕಾಲದಲ್ಲಿ ಒಂದು ಕಥೆಯನ್ನೂ ಹೇಳುತ್ತಿರುತ್ತೇನೆ ಮತ್ತು ಕವಿತೆಯನ್ನೂ ಹೇಳುತ್ತಿರುತ್ತೇನೆ. ಇದರ ಹಿಂದಿನ ನನ್ನ ನಂಬಿಕೆ ಏನು ಅಂದ್ರೆ, ಹೀಗೆ ಮಾಡುವುದರಿಂದ ನಾನು ಸೃಷ್ಟಿಸುವ ಪ್ರತಿ ಪದದ ಹಿಂದೆ ಇರುವ ಗಹನತೆಯನ್ನು ಓದುಗ ಅಪ್ಪುತ್ತಾನೆ ಅನ್ನುವ ತಿಳಿವಳಿಕೆ. ನನ್ನ ಓದುಗರು ನನ್ನ ಪ್ರತಿರೂಪ ಅನ್ನುವ ನಂಬಿಕೆಯಲ್ಲಿ ನಾನು ಬರೆಯುತ್ತೇನೆ.

**◆ ನೀವು ವಿಶಿಷ್ಟ ವ್ಯಕ್ತಿಗಳನ್ನು ಮತ್ತು**